## <u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್) ಸಂಸ್ಥೆಯ ಪಯಣ ಹಾಗೂ ಪ್ರಯೋಗಗಳು</u>

1992 ರಲ್ಲಿ ಪ್ರಾರಂಭವಾದ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (**ಸಿಡಾಕ್**) ಧಾರವಾಡ ಸಂಸ್ಥೆಯು ತನ್ನ ಪಯಣದಲ್ಲಿ ವಿವಿಧ ಯೋಜನೆಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿ ಅನೇಕ ಗರಿಗಳನ್ನು ತನ್ನ ಮುಡಿಗೆರಿಸಿಕೊಂಡು ಹಿರಿಮೆಯನ್ನು ಹೆಚ್ಚಿಸಿಕೊಂಡಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ :

### <u>ನಮ್ಮ ಸಂಸ್ಥೆಯ ಏರ್ಪಡಿಸಿರುವ ಪ್ರಮುಖ ಕಾರ್ಯಕ್ರಮಗಳು ಕೆಳಗಿನಂತಿರುತ್ತವೆ.</u>

1. **ದಿಶಾ ಹಾಗೂ ಕೌಶಲ್ಯ ಉದ್ಯೋಗ ಯೋಜನೆ** : ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಸಂಸ್ಥೆ (UNDP) ಯ ಪ್ರಾಯೋಜಕತ್ವದಡಿ ದಿಶಾ ಯೋಜನೆಯನ್ನು 2017-18 ಹಾಗೂ 2018-19 ನೇ ಸಾಲಿನಲ್ಲಿ ಹಾಗೂ 2019-20 ರಲ್ಲಿ ಕೌಶಲ್ಯ ಉದ್ಯೋಗ ಯೋಜನೆಯನ್ನು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಾಯೋಜಕತ್ವದಡಿ ಅನುಷ್ಠಾನಗೊಳಿಸಿ ಯುವಕ ಯುವತಿಯರಿಗೆ ಔಟ್ ರೀಚ್ ಹಾಗೂ ಪ್ರೇರಣಾ ತರಬೇತಿ, ದಿಶಾ ರೆಡಿ, ದಿಶಾ ಸ್ಟಡಿ ಹಾಗೂ ದಿಶಾ ಗೋ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಹಮ್ಮಿಕೊಂಡು ನಿರಂತರ ಅನುಸರಣೆ ಹಾಗೂ ಬೆಂಬಲ ಸೇವೆಯನ್ನು ನೀಡಿ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳು ಆರಂಭವಾಗಲು ಮುನ್ನುಡಿ ಬರೆಯಲಾಗಿದೆ.

2. **ವಿಜ್ಞಾನ ಹಾಗೂ ತಂತ್ಞಾನ ಉದ್ಯಮಶೀಲತಾ ಅಭಿವೃದ್ಧಿ (ಸ್ಟೆಡ್) ಯೋಜನೆ** : ಭಾರತ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಪ್ರಾಯೋಜಕತ್ವದಲ್ಲಿ ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ವಿಜಯಪುರ ಹಾಗೂ ಚಾಮರಾಜ ನಗರ ಜಿಲ್ಲೆಗಳಲ್ಲಿ ವಿಜ್ಞಾನ ಹಾಗೂ ತಂತ್ಞಾನ ಉದ್ಯಮಶೀಲತಾ ಅಭಿವೃದ್ಧಿ (ಸ್ಟೆಡ್) ಯೋಜನೆಗಳನ್ನು ನಾಲ್ಕು ವರ್ಷದ ಅವಧಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹೊಸ ಉದ್ಯಮಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಈ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ.

3. **ಆಹಾರ ಸಂಸ್ಕರಣಾ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ** : ಭಾರತ ಸರ್ಕಾರದ ಆಹಾರ ಸಂಸ್ಕರಣಾ ಸಚಿವಾಲಯದ ಪ್ರಾಯೋಜಕತ್ವದಲ್ಲಿ ಆಹಾರ ಸಂಸ್ಕರಣಾ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು CFTRI & DFRL ಇವರೊಂದಿಗೆ ಸಂಪರ್ಕವನ್ನು ಕಲ್ಪಿಸಿ ತರಬೇತಿ ಪಡೆದ ಅಭ್ಯರ್ಥಿಗಳು ತಂತ್ರಜ್ಞಾನವನ್ನು ಪಡೆದು ತಮ್ಮದೇ ಆದ ಆಹಾರ ಸಂಸ್ಕರಣ ಘಟಕಗಳನ್ನು ಪ್ರಾರಂಭಿಸಲು ಬೆಂಬಲ ಸೇವೆಯನ್ನು ನೀಡಲಾಗಿದೆ.

4. **ಕವಾಡ ಯೋಜನೆ** : ಬ್ರಿಟೀಷ ಸರ್ಕಾರದ DFID ಪ್ರಾಯೋಜಕತ್ವದಲ್ಲಿ 2002 ರಿಂದ 2005ರ ಅವಧಿಯಲ್ಲಿ ಬಳ್ಳಾರಿ ಹಾಗೂ ದಾವಣಗೇರೆ ಜಿಲ್ಲೆಗಳಲ್ಲಿ ಬರುವ ಉಪ್ಪರಹಳ್ಳ ಜಲಾನಯನ ಪ್ರದೇಶದಲ್ಲಿ ಭೂರಹಿತರಿಗೆ ಹಾಗೂ ಅತೀ ಸಣ್ಣ ಹಿಡುವಳಿದಾರರಿಗೆ ಪ್ರೇರೇಪಣೆ ಮಾಡಿ ಉದ್ಯಮಶೀಲತಾಭಿವೃದ್ಧಿ ತರಬೇತಿಯನ್ನು ನೀಡಿ ವಿವಿಧ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿ ಅವರಿಗೆ ವ್ಯವಸ್ಥಿತ ಬೆಂಬಲ ಸೇವೆಯನ್ನು ಒದಗಿಸಿ ವಿವಿಧ ಇಲಾಖೆ, ಹಣಕಾಸು ಸಂಸ್ಥೆಗಳು, ಮಾರುಕಟ್ಟೆ ಇತ್ಯಾದಿಗಳೊಂದಿಗೆ ಸಂಪರ್ಕವನ್ನು ಕಲ್ಪಿಸಿ ಪ್ರಾಥಮಿಕ ಪಾಲುದಾರರ ಆದಾಯವನ್ನು ದ್ವಿಗುಣವಾಗಲು ನೋಡಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಯಶಸ್ಸಿನ ಪ್ರಮಾಣ ಶೇಕಡಾ 72.2% ಇದ್ದು ಸಾಲ ಮರುಪಾವತಿ ಶೇಕಡಾ 80% ಕ್ಕಿಂತ ಹೆಚ್ಚು ಇರುತ್ತದೆ. ಈ ಯೋಜನೆಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಸಂಸ್ಥೆಯಿಂದ ಪ್ರಶಂಸೆ ಹಾಗೂ ಪ್ರೋತ್ಸಾಹಧನ ಬಂದಿರುತ್ತದೆ.

5. **ಸುಜಲಾ ಯೋಜನೆ** : ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಸರ್ಕಾರದ ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಧಾರವಾಡ, ಹಾವೇರಿ ಹಾಗೂ ತುಮಕೂರು ಜಿಲ್ಲೆಗಳ ವಿವಿಧ ಜಲಾನಯನ ಪ್ರದೇಶಗಳಲ್ಲಿ ವಿವಿಧ ಉದ್ಯಮಶೀಲತಾಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಂಡು ಸ್ವಸಹಾಯ ಸಂಘಧ ಅಭ್ಯರ್ಥಿಗಳು ಆದಾಯ ಉತ್ಪನ್ನ ಚಟುವಟಿಕೆಗಳನ್ನು ಪ್ರಾರಂಭಿಸುವಲ್ಲಿ ಪ್ರೋತ್ಸಾಹಿಸಲಾಗಿದೆ.

6. **ಸಣ್ಣ, ಅತಿ ಸಣ್ಣ ಉದ್ಯಮಶೀಲರಿಗೆ ಸ್ಮಾರ್ಟ್ ಟೆಕ್ನಾಲಜಿ ಫಾರ ಸ್ಮಾರ್ಟ್‌ರ್ ಬಿಜಿನೆಸ್ ಕಾರ್ಯಕ್ರಮ** : ಎಚ್.ಪಿ. (ಹಾವಲೆಟ್ & ಪ್ಯಾಕರ್ಡ್) ಪ್ರಾಯೋಜಕತ್ವದಡಿ ಸಣ್ಣ ಉದ್ಯಮಗಳ ಅಭಿವೃದ್ಧಿ ಯೋಜನೆಯಡಿ ಸಣ್ಣ, ಅತಿ ಸಣ್ಣ ಉದ್ಯಮಶೀಲರಿಗೆ ಎರಡು ವರ್ಷಗಳ ಯೋಜನಾವಧಿಯಲ್ಲಿ ಸ್ಮಾರ್ಟ್ ಟೆಕ್ನಾಲಜಿ ಫಾರ ಸ್ಮಾರ್ಟ್‌ರ್ ಬಿಜಿನೆಸ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಣ್ಣ ಉದ್ಯಮಶೀಲರು ಉದ್ಯಮಗಳ ನಿರ್ವಹಣೆಯಲ್ಲಿ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಈ ಯೋಜನೆಯಡಿ ಸಿಡಾಕ್ ಸಂಸ್ಥೆಗೆ ಎಚ್.ಪಿ. ಕಂಪನಿಯಿಂದ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳಿಗಾಗಿ ಅನುದಾನ ಹಾಗೂ ಸಿಡಾಕ್ ಇಬ್ಬರು ಅಧಿಕಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿಗಾಗಿ ವಿಶೇಷ ತರಬೇತಿಯನ್ನು ಈ ಸಂಸ್ಥೆಯಿಂದ ಪಡೆಯಲಾಗಿದೆ.

7. **ಸಂಕಲ್ಪ ಯೋಜನೆ** : 2020-21 ನೇ ಸಾಲಿನಲ್ಲಿ ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಸಚಿವಾಲಯದ ಯೋಜನೆಯಾದ ಸಂಕಲ್ಪ ಯೋಜನೆಯನ್ನು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಕರ್ನಾಟಕ ರಾಜ್ಯದ 16 ಜಿಲ್ಲೆಗಳಲ್ಲಿ ಉದ್ಯಮಶೀಲತಾ ವಿಕಸನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ 35 ಕಿರು/ಸಣ್ಣ ಉದ್ಯಮಗಳು ಸ್ಥಾಪನೆಯಾಗಿರುತ್ತದೆ.

8. **ತೆಂಗಿನ ನಾರು ಆಧಾರಿತ ಉದ್ಯಮಗಳು ಹಾಗೂ ಕ್ಲಸ್ಟರ್‌ಗಳು** : ಭಾರತ ಸರ್ಕಾರದ ತೆಂಗಿನ ನಾರು ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಸರ್ಕಾರದ ತೆಂಗಿನ ನಾರು ಅಭಿವೃದ್ಧಿ ಸಂಸ್ಥೆಯೊಂದಿಗೆ ಮೂರು ವರ್ಷದ ಅವಧಿಗೆ ಒಪ್ಪಂದ ಮಾಡಿಕೊಂಡು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಬೆಂಗಳೂರು(ಗ್ರಾ), ತುಮಕೂರು, ಹಾಸನ ಜಿಲ್ಲೆಗಳಲ್ಲಿ ವಿವಿಧ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ, ಕ್ಷೇತ್ರ ಭೇಟಿ, ಕೌಶಲ್ಯಾಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಂಡು ತೆಂಗಿನ ನಾರು ಆಧಾರಿತ ಉದ್ಯಮಗಳು ಹಾಗೂ ಕ್ಲಸ್ಟರ್‌ಗಳು ಕಾರ್ಯರೂಪಕ್ಕೆ ಬರುವಂತೆ ಸೇವೆಯನ್ನು ನೀಡಲಾಗಿದೆ.

9. **ಉಪನ್ಯಾಸಕರ ಅಭಿವೃದ್ಧಿ ತರಬೇತಿ ಕಾರ್ಯಕ್ರಮ** : ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿಯವರ ಪ್ರಾಯೋಜಕತ್ವದಲ್ಲಿ ವಿಜ್ಞಾನ ಹಾಗೂ ತಾಂತ್ರಿಕ ಕಾಲೇಜುಗಳ ಉಪನ್ಯಾಸಕರುಗಳಿಗೆ ಫ್ಯಾಕಲ್ಟಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳನ್ನು ಕೂಡಾ ಅನುಷ್ಠಾನಗೊಳಿಸಲಾಗಿದೆ.

10. **ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಾಯೋಜಕತ್ವದಡಿ ಕೌಶಲ್ಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮ** : ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿಯವರ ಪ್ರಾಯೋಜಕತ್ವದಲ್ಲಿ ಎಂಟು ವಾರಗಳ ಕೌಶಲ್ಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

11. **"ಉದ್ಯಮಿಯಾಗು ಉದ್ಯೋಗನೀಡು"** : ಕರ್ನಾಟಕ ಸರ್ಕಾರದ "ಉದ್ಯಮಿಯಾಗು ಉದ್ಯೋಗನೀಡು" ಅಭಿಯಾನದಡಿ ಅಂತಿಮ ವರ್ಷದ ಇಂಜನೀಯರಿಂಗ್, ಎಂ.ಬಿ.ಎ. ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಒಂದು ದಿನದ ಉದ್ಯಮಶೀಲತಾ ಪ್ರೇರೇಪಣಾ ಶಿಬಿರವನ್ನು ಧಾರವಾಡ, ವಿಜಾಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

12. **ಭಾರತ ಸರ್ಕಾರದ ಕಿರು, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳ ಸಚಿವಾಲಯದ ಪ್ರಾಯೋಜಕತ್ವದಡಿ ಕೌಶಲ್ಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು** : ಭಾರತ ಸರ್ಕಾರದ ಕಿರು, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳ ಸಚಿವಾಲಯದ Ni-MSME, Hyderabad ಇವರ ಪ್ರಾಯೋಜಕತ್ವದಲ್ಲಿ ವಿವಿಧ ಕೌಶಲ್ಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

13. **ಕುಶಲಕರ್ಮಿಗಳಿಗೆ ತರಬೇತಿ** : ಭಾರತ ಸರ್ಕಾರದ ಕರಕುಶಲ ಹಾಗೂ ಜವಳಿ ಇಲಾಖೆಯ ಸಚಿವಾಲಯದ ಪ್ರಾಯೋಜಕತ್ವದಲ್ಲಿ ಕುಶಲಕರ್ಮಿಗಳಿಗೆ ವಿವಿಧ ಉದ್ಯಮಶೀಲತಾಭಿವೃದ್ಧಿ, ನಿರ್ವಹಣಾ ಅಭಿವೃದ್ಧಿ, ಕೌಶಲ್ಯ ಉನ್ನತೀಕರಣ ಹಾಗೂ ಶೈಕ್ಷಣಿಕ ಪ್ರವಾಸಗಳನ್ನು ಹಮ್ಮಿಕೊಳ್ಳಲಾಗಿದೆ.

14. **ವಿವಿಧ ಇಲಾಖೆ/ನಿಗಮ/ಸಂಸ್ಥೆಗಳ ಅಧಿಕಾರಿ/ಸಿಬ್ಬಂದಿಯವರಿಗೆ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳು** : ಕರ್ನಾಟಕ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹಾಗೂ ಕರ್ನಾಟಕ ಸರಕಾರದ ಸಾರ್ವಜನಿಕ ಉದ್ದಿಮೆಗಳ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮಗಳಲ್ಲಿ ಅಧಿಕಾರಿಗಳ ದಕ್ಷತೆಯನ್ನು ಹೆಚ್ಚಿಸುವಲ್ಲಿ ಹಾಗೂ ಅವರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಪ್ರತಿಷ್ಠಿತ ಭೋದಕರನ್ನು ಆಹ್ವಾನಿಸಿ ತರಬೇತಿಯನ್ನು ನೀಡಲಾಗಿದೆ.

15. **ಬುನಾದಿ ಹಾಗೂ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು** : ಹೆಸ್ಕಾಂ, ಟೆಲ್ಕಾನ್, ಟಾಟಾಮೋಟರ್ಸ್, ಅಪೆಕ್ಸ್ ಅಟೋ ಇತ್ಯಾದಿ ಕಂಪನಿಗಳ ಅಧಿಕಾರಿ/ಸಿಬ್ಬಂದಿಗಳಿಗೆ ಬುನಾದಿ ಕಾರ್ಯಕ್ರಮ, ಹಾಗೂ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

16. **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪ್ರಾಯೋಜಕತ್ವದ ಯೋಜನೆಗಳು** : ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳಾದ ಪ್ರಧಾನ ಮಂತ್ರಿಗಳ ರೋಜಗಾರ ಯೋಜನೆ, ಕೈಗಾರಿಕಾ ವಿಕಾಸ ಯೋಜನೆ, ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ, ಮುಖ್ಯಮಂತ್ರಿ ಉದ್ಯೋಗ ಸೃಜನ ಯೋಜನೆ, ಇತ್ಯಾದಿ ಯೋಜನೆಗಳಡಿ ವಿವಿಧ ಉದ್ಯಮಶೀಲತಾಭಿವೃದ್ಧಿ ಚಟುವಟಿಕೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾವಿರಾರು ಜನರು ತಮ್ಮ ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಲು ಸಹಾಯ ಹಸ್ತವನ್ನು ನೀಡಿ ಪರೋಕ್ಷವಾಗಿ ಲಕ್ಷಾಂತರ ಜನರಿಗೆ ಉದ್ಯೋಗಗಳನ್ನು ಸೃಷ್ಠಿಸಲು ಕಾರಣೀಕರ್ತವಾಗಿದೆ.

ಉದ್ಯಮಿಗಳು ಅಗತ್ಯವಾಗಿ ಹುಟ್ಟಬೇಕಾಗಿಲ್ಲ ಎಂಬ ನಂಬಿಕೆಯೊಂದಿಗೆ ಉದ್ಯಮಶೀಲತೆ ತನಗೆ ತಾನೇ ಜನಿಸುತ್ತದೆ ಎಂದು ನಂಬದೇ ಅದನ್ನು ಸೂಕ್ತ ನಿರ್ದೇಶಿತ ಚಟುವಟಿಕೆ ಹಾಗೂ ಪರಿಣಿತ ತರಬೇತಿಯ ಮೂಲಕ ಕರ್ನಾಟಕ ರಾಜ್ಯಾದ್ಯಂತ ಉದ್ಯಮಶೀಲತಾ ಆಂದೋಲನವನ್ನು ಮುನ್ನಡಿಸುತ್ತಿದೆ. ಸಿಡಾಕ್ ಸಂಸ್ಥೆಯು ಪ್ರಾರಂಭವಾದಾಗಿನಿಂದ 2021 ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕ ಸರ್ಕಾರ, ಭಾರತ ಸರಕಾರದ ವಿವಿಧ ಇಲಾಖೆಗಳು ಮತ್ತು ಹೆಸರಾಂತ ಕಂಪನಿ/ಸಂಸ್ಥೆಗಳು/ನಿಗಮಗಳ ಪ್ರಾಯೋಜಕತ್ವದಲ್ಲಿ **10,765 ಕಾರ್ಯಕ್ರಮಗಳಲ್ಲಿ 5,68,306 ಅಭ್ಯರ್ಥಿಗಳಿಗೆ** ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿದೆ.